# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 385 |
| 2 | ಸದಸ್ಯರ ಹೆಸರು | ಶ್ರೀ ಕವಟಗಿ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ವಿಷಯ | ಬೆಳಗಾವಿ ಜಿಲ್ಲೆಯಾದ್ಯಂತ ಎಷ್ಟು ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮಗಳಾಗಿ ಘೋಷಣೆ ಮಾಡಲಾಗಿದೆ |
| 4 | ಉತ್ತರಿಸುವ ದಿನಾಂಕ | 12.12.2018 |
| 5 | ಉತ್ತರಿಸುವ ಸಚಿವರು | ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಕ್ರ.ಸಂ. | ಪ್ರಶ್ನೆ ವಿವರ | ಉತ್ತರ |
|---|---|---|
| ಅ) | ಬೆಳಗಾವಿ ಜಿಲ್ಲೆಯ ಯಾವ ಯಾವ ವಿಧಾನ ಸಭಾ ಕ್ಷೇತ್ರಗಳಲ್ಲಿ ಎಷ್ಟು ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮಗಳನ್ನಾಗಿ ಮಾಡಲು ಆಯ್ಕೆ ಮಾಡಲಾಗಿದೆ; ಇದರಲ್ಲಿ ಎಷ್ಟು ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮಗಳಾಗಿ ಘೋಷಣೆ ಮಾಡಲಾಗಿದೆ; (ವಿವರ ನೀಡುವುದು) | ಬೆಳಗಾವಿ ಜಿಲ್ಲೆಯಲ್ಲಿ ಪೋಡಿ ಮುಕ್ತ ಗ್ರಾಮ ಅಭಿಯಾನದಲ್ಲಿ ಆಯ್ಕೆ ಮಾಡಿರುವ ಗ್ರಾಮಗಳು ಮತ್ತು ಪೋಡಿ ಮುಕ್ತ ಗ್ರಾಮಗಳಾಗಿ ಘೋಷಿಸಿರುವ ಗ್ರಾಮಗಳ ಬಗ್ಗೆ ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಆ) | ಬೆಳಗಾವಿ ಜಿಲ್ಲೆಗೆ ಮಂಜೂರಾಗಿರುವ ಸರ್ಕಾರಿ ಸರ್ವೇಯರ್‌ಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು; (ತಾಲ್ಲೂಕುವಾರು ವಿವರ ನೀಡುವುದು) | ಬೆಳಗಾವಿ ಜಿಲ್ಲೆಗೆ ಮಂಜೂರಾಗಿರುವ ಮತ್ತು ಖಾಲಿ ಇರುವ ಸರ್ಕಾರಿ ಸರ್ವೇಯರ್‌ಗಳ ಹುದ್ದೆಗಳ ವಿವರ. ಅನುಬಂಧ-2 ರಲ್ಲಿ ನೀಡಿದೆ.<br>ಖಾಲಿ ಇರುವ ಹುದ್ದೆಗಳು ಮುಂಬಡ್ತಿಗಾಗಿ ಕಾಯ್ದಿರಿಸಿದ ಹುದ್ದೆಗಳಾಗಿದ್ದು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. |
| ಇ) | ಜಿಲ್ಲೆಯಲ್ಲಿ ಸರ್ವೇಯರ್‌ಗಳು, ರೈತರಿಗೆ ಭೂಮಿ ಪೋಡಿ ಮಾಡಿಸಿ ಕೊಳ್ಳುತ್ತಿರುವ ಜಮೀನುದಾರರಿಗೆ ಅನಾವಶ್ಯಕವಾಗಿ ತೊಂದರೆ ನೀಡುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಈ) | ಬಂದಿದ್ದಲ್ಲಿ, ಇಂತಹ ಅಧಿಕಾರಿಗಳ, ಸರ್ವೇಯರ್‌ಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗುವುದು; (ಸಂಪೂರ್ಣ ವಿವರ ನೀಡುವುದು) | ಭೂಮಾಪನ ಇಲಾಖೆಯಲ್ಲಿ ಭೂಮಾಪಕರು ಹಾಗೂ ಅಧಿಕಾರಿಗಳು ಅನಾವಶ್ಯಕವಾಗಿ ತೊಂದರೆ ನೀಡುತ್ತಿರುವ ಬಗ್ಗೆ ಸಾರ್ವಜನಿಕರಿಂದ ಬಂದಿರುವ ದೂರುಗಳ ಬಗ್ಗೆ ಸಂಬಂಧಿಸಿದ ಭೂದಾಖಲೆಗಳ ಉಪ ನಿರ್ದೇಶಕರು/ ಭೂದಾಖಲೆಗಳ ಜಂಟಿ ನಿರ್ದೇಶಕರುಗಳಿಂದ ತನಿಖೆ ನಡೆಸಿ, ವರದಿ ಪಡೆದು ಇಲಾಖಾ ವಿಚಾರಣೆಯನ್ನು ನಡೆಸಿ ತಪ್ಪಿತಸ್ಥ ಭೂಮಾಪಕರ/ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ. |

| | | |
|---|---|---|
| | | ಭೂಮಾಪನ ಇಲಾಖೆಯಲ್ಲಿ ಅಳತೆ ಕೋರಿ ಬರುವ ಅರ್ಜಿಗಳನ್ನು ಆನ್‌ಲೈನ್ ನಲ್ಲಿ ಸ್ವೀಕರಿಸಿ ಹಿರಿತನದಂತೆ ಅಳತೆಗೆ ನೀಡಿ ಅಳತೆಯಾದ ನಂತರ ಭೂಮಾಪಕರು ONLINE ನಲ್ಲೆ ಕಡತಗಳನ್ನು UPLOAD ಮಾಡಲು ಅವಕಾಶ ಕಲ್ಪಿಸಲಾಗಿದೆ ಹಾಗೂ ಕಡತಗಳ ಬಾಬ್ತು ಪರಿಶೀಲನೆ ಮತ್ತು ಅನುಮೋದನೆಯನ್ನು ಸಹ ONLINE ನಲ್ಲೇ ನಿರ್ವಹಿಸಲಾಗುತ್ತಿದೆ. ಪ್ರತಿ ಹಂತದಲ್ಲಿಯೂ ಕಡತಗಳನ್ನು FIFO (ಸರದಿ ಸಾಲಿನಂತೆ)ದಂತೆ ನಿರ್ವಹಿಸ ಲಾಗುತ್ತಿದ್ದು ವಿಳಂಬಕ್ಕೆ ಅವಕಾಶವಿರುವುದಿಲ್ಲ. ಆದಾಗ್ಯೂ ಕಡತ ನಿರ್ವಹಣೆಯಲ್ಲಿ ವಿಳಂಬವಾದಲ್ಲಿ ವಿಳಂಬಕ್ಕೆ ಕಾರಣವಾದ ಸಿಬ್ಬಂದಿಗಳು ಯಾರು ಎಂಬುದು ಮತ್ತು ವಿಳಂಬದ ಅವಧಿ FIFO(ಸರದಿ ಸಾಲಿನಂತೆ)ದಲ್ಲಿ ಕಂಡುಬರುತ್ತದೆ. ವಿಳಂಬಕ್ಕೆ ಕಾರಣವಾದ ಸಿಬ್ಬಂದಿಗಳಿಗೆ ಕಾರಣ ಕೇಳಿ ನೋಟೀಸ್ ನೀಡಿ, ವಿಚಾರಣೆಯನ್ನು ಮಾಡಲಾಗುತ್ತಿದೆ. |
| ಉ) | ಸರ್ಕಾರವು ಗುತ್ತಿಗೆ ಆಧಾರದ ಮೇಲೆ ಖಾಸಗಿ ಸರ್ವೇಯರ್‌ಗಳನ್ನು ನೇಮಿಸಿ ಕೊಂಡಿದ್ದು, ಅವರಿಗೆ ಸಮಯಕ್ಕೆ ಸರಿಯಾಗಿ ಪಾವತಿಸಬೇಕಾದ ಅಳತೆ ಶುಲ್ಕವನ್ನು ನೀಡದಿರುವುದು ನಿಜವೇ? (ವಿವರ ನೀಡುವುದು) | ಸರ್ಕಾರವು ಗುತ್ತಿಗೆ ಆಧಾರದ ಮೇಲೆ ಖಾಸಗಿ ಸರ್ವೇಯರ್‌ಗಳನ್ನು (ಪರವಾನಗಿ ಭೂಮಾಪಕರನ್ನು) ನೇಮಿಸಿಕೊಂಡಿದ್ದು, ಅವರಿಗೆ ಪಾವತಿಸ ಬೇಕಾದ ಅಳತೆ (ಸೇವಾ ಶುಲ್ಕ) ಶುಲ್ಕವನ್ನು ಸಮಯಕ್ಕೆ ಸರಿಯಾಗಿ ಪಾವತಿಸಲಾಗುತ್ತಿದೆ. |

ಕಂಇ 223 ಭೂದಾಸ 2018

(ಆರ್.ವಿ.ದೇಶಪಾಂಡೆ)
ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು ಸಚಿವರು

# ಅನುಬಂಧ-1

| ವಿಧಾನಸಭಾ ಕ್ಷೇತ್ರದ ಹೆಸರು | ಆಯ್ಕೆ ಮಾಡಿರುವ ಗ್ರಾಮಗಳ ಸಂಖ್ಯೆ | ಪೋಡಿ ಆಗಿರುವ ಗ್ರಾಮಗಳ ಸಂಖ್ಯೆ |
|---|---|---|
| ಅಥಣಿ | 24 | 22 |
| ಅರಭಾಂವಿ | 25 | 25 |
| ಕಾಗವಾಡ | 24 | 22 |
| ಕಿತ್ತೂರು | 43 | 41 |
| ಕುಡಚಿ | 24 | 16 |
| ಖಾನಾಪುರ | 47 | 38 |
| ಗೋಕಾಕ | 35 | 34 |
| ಚಿಕ್ಕೋಡಿ-ಸದಲಗಾ | 22 | 17 |
| ನಿಪ್ಪಾಣಿ | 20 | 15 |
| ಬೆಳಗಾವಿ ಗ್ರಾಮಾಂತರ | 51 | 35 |
| ಬೈಲಹೊಂಗಲ | 57 | 52 |
| ಯಮಕನಮರ್ಡಿ | 32 | 28 |
| ರಾಮದುರ್ಗ | 25 | 22 |
| ರಾಯಭಾಗ | 24 | 19 |
| ಸವದತ್ತಿ | 32 | 30 |
| ಹುಕ್ಕೇರಿ | 31 | 28 |
| **ಒಟ್ಟು** | **516** | **444** |

# ಅನುಬಂಧ-2

| ಕ್ರಸಂ | ಕಛೇರಿಯ ಹೆಸರು | ಮಂಜೂರಿ ಹುದ್ದೆಗಳು | ಭರ್ತಿ | ಖಾಲಿ |
|---|---|---|---|---|
| 1 | ಜಿಲ್ಲಾಧಿಕಾರಿಗಳು, ಬೆಳಗಾವಿ | 3 | 3 | 0 |
| 2 | ಭೂ.ಸ.ನಿ, ಬೆಳಗಾವಿ | 18 | 17 | 1 |
| 3 | ಭೂ.ಸ.ನಿ, ಹುಕ್ಕೇರಿ | 21 | 21 | 0 |
| 4 | ನಗರಮಾಪನ ಹುಕ್ಕೇರಿ (ಭೂ.ಸ.ನಿ ಹುಕ್ಕೇರಿ ಅಧೀನ) | 2 | 2 | 0 |
| 5 | ನಗರಮಾಪನ ಸಂಕೇಶ್ವರ (ಭೂ.ಸ.ನಿ ಹುಕ್ಕೇರಿ ಅಧೀನ) | 1 | 1 | 0 |
| 6 | ಭೂ.ಸ.ನಿ, ಖಾನಾಪುರ | 15 | 12 | 3 |
| 7 | ಭೂ.ಸ.ನಿ, ಚಿಕ್ಕೋಡಿ | 23 | 22 | 1 |
| 8 | ನಗರಮಾಪನ, ಚಿಕ್ಕೋಡಿ (ಭೂ.ಸ.ನಿ ಚಿಕ್ಕೋಡಿ ಅಧೀನ) | 1 | 0 | 1 |
| 9 | ನಗರಮಾಪನ, ನಿಪ್ಪಾಣಿ (ಭೂ.ಸ.ನಿ ಚಿಕ್ಕೋಡಿ ಅಧೀನ) | 0 | 0 | 0 |
| 10 | ಭೂ.ಸ.ನಿ, ಅಥಣಿ | 26 | 24 | 2 |
| 11 | ನಗರಮಾಪನ, ಅಥಣಿ (ಭೂ.ಸ.ನಿ ಅಥಣಿ ಅಧೀನ) | 1 | 1 | 0 |
| 12 | ಭೂ.ಸ.ನಿ, ರಾಯಭಾಗ | 18 | 17 | 1 |
| 13 | ಭೂ.ಸ.ನಿ, ಬೈಲಹೊಂಗಲ | 24 | 21 | 3 |
| 14 | ನಗರಮಾಪನ, ಬೈಲಹೊಂಗಲ (ಭೂ.ಸ.ನಿ ಬೈಲಹೊಂಗಲ ಅಧೀನ) | 2 | 2 | 0 |
| 15 | ಭೂ.ಸ.ನಿ, ಕಿತ್ತೂರು | 1 | 1 | 0 |
| 16 | ಭೂ.ಸ.ನಿ, ಗೋಕಾಕ್ | 14 | 13 | 1 |
| 17 | ನಗರಮಾಪನ ಗೋಕಾಕ್ (ಭೂ.ಸ.ನಿ, ಗೋಕಾಕ್ ಅಧೀನ) | 2 | 2 | 0 |
| 18 | ಭೂ.ಸ.ನಿ, ರಾಮದುರ್ಗ | 13 | 10 | 3 |
| 19 | ನಗರಮಾಪನ, ರಾಮದುರ್ಗ (ಭೂ.ಸ.ನಿ ರಾಮದುರ್ಗ ಅಧೀನ) | 0 | 0 | 0 |
| 20 | ಭೂ.ಸ.ನಿ, ಸವದತ್ತಿ | 17 | 14 | 3 |
| 21 | ನಗರಮಾಪನ, ಸವದತ್ತಿ (ಭೂ.ಸ.ನಿ, ಸವದತ್ತಿ ಅಧೀನ) | 1 | 1 | 0 |
| 22 | ಭೂದಾಖಲೆಗಳ ಜಂಟಿ ನಿರ್ದೇಶಕರು, ನಗರಮಾಪನ, ಉತ್ತರವಲಯ, ಬೆಳಗಾಂ | 4 | 4 | 0 |
| 23 | ಭೂದಾಖಲೆಗಳ ಜಂಟಿ ನಿರ್ದೇಶಕರು, ಮರುಭೂಮಾಪನ, ಬೆಳಗಾಂ | 2 | 2 | 0 |
| 24 | ಭೂ.ಸ.ನಿ, ಮರುಭೂಮಾಪನ, ಬೆಳಗಾಂ | 8 | 7 | 1 |
| 25 | ಭೂ.ಸ.ನಿ, ಮರುಭೂಮಾಪನ, ಹುಕ್ಕೇರಿ | 12 | 9 | 3 |
| 26 | ಭೂ.ಸ.ನಿ, ಮರುಭೂಮಾಪನ, ಖಾನಾಪುರ | 11 | 9 | 2 |
| 27 | ಭೂ.ಸ.ನಿ, ನಗರಮಾಪನ, ಬೆಳಗಾಂ | 6 | 5 | 1 |
| | ಒಟ್ಟು | 246 | 220 | 26 |